# ಆನಂದದ ಆ ದಿವ್ಯಶಿಶು

**ಮಕ್ಕಳಿಗೆ ಕಥೆ ಹೇಳುವ ಮೂಲಕ ಅವರಿಗೆ ನಾವು ಉಪಕಾರ ಮಾಡುತ್ತಿದ್ದೇವೆ ಎನ್ನುವ ಭಾವನೆ ಅರ್ಧ ಸತ್ಯ. ಕಥೆ ಹೇಳುವ ಮೂಲಕ ಹೆಚ್ಚಿನ ಲಾಭವಾಗುತ್ತಿರುವುದು ಪೋಷಕರಿಗೇನೆ. ನಮ್ಮೊಳಗಿನ ಸಣ್ಣತನಗಳನ್ನು ಕಳೆದುಕೊಳ್ಳಲು, ಮಗುತನವನ್ನು ಜಾಗೃತಗೊಳಿಸಲು ಮಕ್ಕಳಿಗೆ ಕಥೆ ಹೇಳುವುದಕ್ಕಿಂತಲೂ ಉತ್ತಮ ಮಾರ್ಗವಿಲ್ಲ.**

■ ಸ್ವಯಂಪ್ರಭಾ



ಭಾರತದ ಪ್ರತಿ ಮನೆಯಲ್ಲೂ ಕಥೆಗಾರಿದ್ದಾರೆ. ಏಕೆಂದರೆ, ಮಕ್ಕಳು ಎಲ್ಲಿರುತ್ತಾರೋ ಅಲ್ಲಿ ಕಥೆಗಾರರು ಇರುವುದು ಅನಿವಾರ್ಯ. ಮಕ್ಕಳಿಗೆ ಕಥೆ ಕೇಳುವುದೆಂದರೆ ತುಂಬಾ ಇಷ್ಟ. 'ಒಂದು ಕಥೆ ಹೇಳು' ಎಂದು ಮಕ್ಕಳು ಅಮ್ಮ ಅಪ್ಪನನ್ನೋ ಅಜ್ಜಿ ಅಜ್ಜನನ್ನೋ ಕಾಡುವುದು ಸಹಜ. ಮಕ್ಕಳನ್ನು ಖುಷಿಪಡಿಸಲಿಕ್ಕಾಗಿ ದೊಡ್ಡವರು ತಾವು ಬಾಲ್ಯದಲ್ಲಿ ಕೇಳಿದ ಕಥೆಗಳನ್ನು ನೆನಪಿಸಿಕೊಳ್ಳುತ್ತಾರೆ. ಮಕ್ಕಳ ಕಥೆ ಕೇಳುವ ಕುತೂಹಲಕ್ಕೆ ತುದಿ ಮೊದಲಾದರೂ ಯಾವುದು?

ಮಕ್ಕಳಿಗೆ ಕಥೆ ಯಾಕೆ ಬೇಕು? ಕಥೆ ಮಕ್ಕಳ ಮನಸ್ಸನ್ನು ಅರಳಿಸುತ್ತದೆ. ಆದರೆ, ಎಷ್ಟೋ ಪೋಷಕರಿಗೆ, ಮಕ್ಕಳಿಗೆ ಕಥೆ ಹೇಳುವ ಬಗ್ಗೆ ಅಷ್ಟೇನೂ ಉತ್ಸಾಹವಿರುವುದಿಲ್ಲ. ಕಥೆ ಹೇಳುವುದು, ಕೇಳುವುದು ಕಾಲಹರಣವಷ್ಟೇ ಎನ್ನುವ ಅಭಿಪ್ರಾಯ ಅವರದು. ಹಾಗಾಗಿಯೇ ಮಕ್ಕಳು ಕಥೆಪುಸ್ತಕ ಹಿಡಿದು ಕುಳಿತರೆ ಆಕಾಶ ತಲೆ ಮೇಲೆ ಬಿದ್ದಂತೆ ಆತಂಕಪಡುವ ಪೋಷಕರಿದ್ದಾರೆ. ಮಕ್ಕಳ ಕೈಯಲ್ಲಿನ ಕಥೆ ಪುಸ್ತಕವನ್ನು ಕಿತ್ತು, ಅಲ್ಲಿ ಪಠ್ಯಪುಸ್ತಕ ಪ್ರತಿಷ್ಠಾಪನೆ ಮಾಡಿದಾಗಷ್ಟೇ ಅವರಿಗೆ ನೆಮ್ಮದಿ. ಹೀಗೆ ಎಳೆಯರನ್ನು ಕಥೆಗಳಿಂದಷ್ಟೇ ದೂರವಿಡುವುದಿಲ್ಲ. ಎಳೆಯ ವಯಸ್ಸಿಗೆ ಬೇಕಾದ ಅದ್ಭುತ ಕಲ್ಪನಾಶಕ್ತಿಯಿಂದಲೇ ದೂರ ಕರೆದೊಯ್ದುಬಿಡುತ್ತಾರೆ.

ಮಕ್ಕಳ ಕಥೆಗಳ ಉದ್ದೇಶ ಎರಡು ಬಗೆಯದು. ಒಂದು ಮನರಂಜನೆ, ಮತ್ತೊಂದು ಮನೋವಿಕಾಸ. ಬಹಳಷ್ಟು ಪೋಷಕರು ಕಥೆಯ ಮನರಂಜನೆಯ ಗುಣವನ್ನು ಗುರ್ತಿಸುತ್ತಾರೆಯೇ ಹೊರತು, ಅದರ ಮನೋವಿಕಾಸದ ಸಾಧ್ಯತೆಗಳನ್ನು ಗಮನಿಸುವುದೇ ಇಲ್ಲ. 'ಥಿಂಕ್ ಬಿಗ್' (ದೊಡ್ಡದಾಗಿ ಯೋಚಿಸಿ) ಎಂದು ಆಧುನಿಕ ಸಂದರ್ಭದ ಜೀವನಕಲೆಯ ತಜ್ಞರು ತಮ್ಮ ಕ್ಲಾಸ್ ರೂಂಗಳಲ್ಲಿ ಹೇಳಿಕೊಡುವುದನ್ನೇ ಮಕ್ಕಳ ಕಥೆಗಳು ಸದ್ದಿಲ್ಲದೆ ಪೂರೈಸುತ್ತವೆ. ಮಕ್ಕಳ ಯೋಚನಾಶಕ್ತಿಯನ್ನು, ಕಲ್ಪನಾಶಕ್ತಿಯನ್ನು ಕಥೆಗಳು ಬೆಳೆಸುತ್ತವೆ.

ಕಥೆಯ ಮತ್ತೊಂದು ಲಾಭ ಪೋಷಕರು ಮತ್ತು ಮಕ್ಕಳ ನಡುವೆ ಬೆಳೆಯುವ ಆತ್ಮೀಯ ಬಾಂಧವ್ಯ. ಪರಸ್ಪರ ಖಾಸಗಿ ಸಮಯ ಕಥೆಯ ನೆಪದಲ್ಲಿ ಒದಗಿಬರುತ್ತದೆ. ಇದಕ್ಕಿಂತ ದೊಡ್ಡ ಲಾಭ ಬೇಕೆ?

ಕಥೆ ಹೇಳುವ ಸಮಯಕ್ಕೆ ಮಕ್ಕಳಿಗೆ ತನ್ನೆದುರಿನ ಅಮ್ಮ ಅಥವಾ ಅಜ್ಜಿ ಸೂಪರ್ ವುಮನ್ ಆಗಿಬಿಡುತ್ತಾಳೆ. ಅದೇ ಕಾಲಕ್ಕೆ ಕಥೆಯಲ್ಲಿನ ಪಾತ್ರಗಳಲ್ಲಿ ಮಕ್ಕಳು ತಮ್ಮನ್ನು ಗುರ್ತಿಸಿಕೊಳ್ಳುತ್ತಾರೆ.

ಈಗ ಇನ್ನೊಂದು ದಿಕ್ಕಿನಿಂದ ಯೋಚಿಸೋಣ. ದೊಡ್ಡವರು ಕಥೆ ಹೇಳುವುದು ಲೋಕರೂಢಿ. ಆ ರೂಢಿಯನ್ನು ಬದಲಿಸಲು ನೀವು ಪ್ರಯತ್ನಿಸಿ. 'ನನಗೆ ಕಥೆ ಹೇಳಿ ಹೇಳಿ ಬೇಜಾರಾಗಿದೆ. ಈಗ ನೀನು ನನಗೊಂದು ಕಥೆ ಹೇಳು' ಎಂದು ನಿಮ್ಮ ಮಗುವನ್ನು ಒತ್ತಾಯಿಸಿ. ಮಕ್ಕಳಲ್ಲಿನ ಕಥೆಗಾರ ಹೊರಬರಲು ಅವಕಾಶ ಕಲ್ಪಿಸಿ. ಯಾರಿಗೊತ್ತು, ನಿಮ್ಮ ಮಕ್ಕಳಲ್ಲಿ ಹೇಳಿಕೊಳ್ಳಲಿಕ್ಕೆ ಸಾಕಷ್ಟು ಕಥೆಗಳಿರಬಹುದು. ಆ ಕಥೆಗಳಲ್ಲಿ ನೀವು ಅಚ್ಚರಿಪಡುವಂತಹ ಸಂಗತಿಯೊಂದು ಇರಬಹುದು.

ಆರಂಭದಲ್ಲಿ ಮಕ್ಕಳಿಗೆ ಕಥೆ ಹೇಳುವುದು ಕಷ್ಟವಾಗಬಹುದು. ನೀವು ಅವರಿಗೆ ಸಹಾಯ ಮಾಡಿ. ಶಾಲೆಗಳಲ್ಲಿನ ದಿನಚರಿಯನ್ನೇ ಕಥೆ ಮಾಡಲು ಹೇಳಿ. ಸ್ನೇಹಿತರನ್ನೇ ಪಾತ್ರಗಳನ್ನಾಗಿ ಮಾಡಲು ಹೇಳಿ. ನೀವು ಮಾಡಬೇಕಾದುದು ಇಷ್ಟೇ. ಮಗು ಏನು ಹೇಳಿದರೂ ಗೋಣಾಡಿಸುವುದು. ಈ ಹೂಂಗುಡುವ ಕಥೆಯ ಆಟ, ಮಕ್ಕಳ ಮನಸ್ಸನ್ನು ಅರ್ಥೈಸಿಕೊಳ್ಳುವ ದೃಷ್ಟಿಯಿಂದಲೂ ಸಹಕಾರಿ.

ಪ್ರಸ್ತುತ ನಾವು ಮಕ್ಕಳಿಗೆ ಕಥೆ ಹೇಳುವುದನ್ನು ಟೀವಿ ಮತ್ತು ಮೊಬೈಲ್‌ಗಳಿಗೆ ಬಿಟ್ಟುಬಿಟ್ಟಿದ್ದೇವೆ. ಯಂತ್ರಗಳು ಹೇಳುವ ಕಥೆಗಳಲ್ಲೂ ಮನರಂಜನೆ ಅಥವಾ ಮನೋವಿಕಾಸದ ಸಾಧ್ಯತೆ ಇದೆ. ಆದರೆ, ಕಥೆ ಹೇಳುವಾಗ ಸಾಧ್ಯವಾಗುವ ಎರಡು ಜೀವಂತ ಮನಸ್ಸುಗಳ ಪರಸ್ಪರ ಅನುಸಂಧಾನ, ಟೀವಿ–ಮೊಬೈಲ್‌ಗಳಿಂದ ಸಾಧ್ಯವಾಗುವುದಿಲ್ಲ. ಇದರಿಂದ ಮಕ್ಕಳಿಗೆ ಬಹಳ ದೊಡ್ಡ ನಷ್ಟವಾಗುತ್ತಿದೆ. ಆದರೆ, ಅದಕ್ಕಿಂತಲೂ ಹೆಚ್ಚು ನಷ್ಟವಾಗುತ್ತಿರುವುದು ಪೋಷಕರಿಗೆ. ಮಕ್ಕಳಿಗೆ ಕಥೆ ಹೇಳುವ ಮೂಲಕ ಅವರಿಗೆ ನಾವು ಉಪಕಾರ ಮಾಡುತ್ತಿದ್ದೇವೆ ಎನ್ನುವ ಭಾವನೆ ಅರ್ಧ ಸತ್ಯ. ಹಾಗೆ ಕಥೆ ಹೇಳುವ ಮೂಲಕ ಹೆಚ್ಚಿನ ಲಾಭವಾಗುತ್ತಿರುವುದು ನಮಗೇನೆ. ನಮ್ಮೊಳಗಿನ ಸಣ್ಣತನಗಳನ್ನು ಕಳೆದುಕೊಳ್ಳಲು, ಮಗುತನವನ್ನು ಜಾಗೃತಗೊಳಿಸಲು ಮಕ್ಕಳಿಗೆ ಕಥೆ ಹೇಳುವುದಕ್ಕಿಂತಲೂ ಉತ್ತಮ ಮಾರ್ಗವಿಲ್ಲ. ಅದನ್ನೇ ಕುವೆಂಪು ಅವರು ಹೇಳುವುದು: 'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯಶಿಶು'.

ಪ್ರತಿಕ್ರಿಯಿಸಿ: **feedback@sudha.co.in**